## ಸರ್ಕಾರಿ ಪ್ರೌಢ ಶಾಲೆ ಬೇಗೂರು ,ಬೆಂಗಳೂರು-೬೮

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ ೨೦೧೭-೧೮

**೯ ನೇ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು:೯೦ ಸಮಯ -೨ಗಂಟೆ ೩೦ ನಿಮಿಷಗಳು**

**ಭಾಗ -'ಎ'**

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೮*೧=೮**

೧. ರಾಷ್ಟ್ರಪತಿಗಳಾಗಿ ಪಡೆಯುತ್ತಿದ್ದ ವೇತನವನ್ನು ರಾಧಾಕೃಷ್ಣನ್ ಅವರು ಹೇಗೆ ಸದುಪಯೋಗಪಡಿಸಿಕೊಂಡರು ?

೨.ಡೊಳ್ಳು ಕುಣಿತ ಯಾವ ಸಂಪ್ರದಾಯಕ್ಕೆ ಸೇರಿದ ಕುಣಿತವಾಗಿದೆ ?

೩. ಗಿರಿಜೆ ಎಲ್ಲಿ ಇರಬೇಕೆಂದು ಶಿವನು ತಿಳಿಸಿದನು ?

೪. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು ?

೫. ಭರತ ಚಕ್ರವರ್ತಿ ಓಲಗಕ್ಕೆ ಹೇಗೆ ಬರುತ್ತಾನೆ ?

೬. ಗಾನರಾಣಿಯರಿಗೆ ಹರಿಶ್ಚಂದ್ರನು ಯಾವ ಬಹುಮಾನವನ್ನು ಕೊಟ್ಟನು ?

೭. ಜಗದಲ್ಲಿ ಎಂತಹ ಜನರಿರುವರು ?

೮. ಅಜ್ಞಾನ ತೊಲಗಿಸಲು ಕವಯಿತ್ರಿ ಇಂದುಮತಿ ಲಮಾಣಿಯವರು ಏನಾಗ ಬಯಸಿದ್ದಾರೆ ?

**ಕೆಳಗಿನ ಪ್ರಶ್ನೆಗಳಿಗೆ ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೯*೨=೧೮**

೯. ಕನ್ನಡ ಮೌಲ್ವಿಯ ವೇಷಭೂಷಣ ಹೇಗಿತ್ತು ?

೧೦.ಶಿಕ್ಷಣದ ಮಹತ್ವವನ್ನು ಕುರಿತು ರಾಧಾಕೃಷ್ಣನ್ ಅವರು ಏನು ಹೇಳಿದ್ದಾರೆ ?

೧೧. ಚೌಕಿಯಲ್ಲಿ ನಡೆಯುವ ವಿಶೇಷಗಳೇನು ?

೧೨. ವೃದ್ಧ ಮಾಹೇಶ್ವರನು ಶಿವಮಂತ್ರವನ್ನು ಹೇಳುತ್ತಿದ್ದ ರೀತಿಯನ್ನು ವಿವರಿಸಿ

೧೩. ಬೇಡ ಏನು ಮಾಡಿದನು ?

೧೪. ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ಬಯಸುವನು ?

೧೫. ಪಂಡರಿಬಾಯಿಯವರು ನಾಟಕದಲ್ಲಿ ಬಣ್ಣ ಹಚ್ಚಲು ಕಾರಣವೇನು ?

೧೬. ರಂಜಾನ್ ಹಬ್ಬದ ಸಮಯದಲ್ಲಿ ತಯಾರಿಸುವ ಖಾದ್ಯಗಳು ಯಾವುವು ?

೧೭. ದುರ್ಗಪ್ಪನು ಶಂಕ್ರಣ್ಣನಿಗೆ ಕುಲದ ಬಗೆಗೆ ಹೇಳಿದ ನೀತಿ ಮಾತುಗಳು ಯಾವುವು ?

**ಈ ಕೆಳಗಿನ ಹೇಳಿಕೆಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೪ *೩=೧೨.**

೧೮. . " ಈ ಮಾಡಿದ ಕಟ್ಟಳೆಯನು ಅವನೊಬ್ಬನು ಮೀರಿದವನು ಸೊದೆಯನಿಕ್ಕುವುದು "

೧೯. " ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು.”

೨೦. " ನಡೆನುಡಿಗಳೆಡೆಯಲ್ಲಿ ಪದತಾಳಗತಿಯಲ್ಲಿ ಕ್ರಾಂತಿಕಿಡಿ ಕೆರಳಬೇಕು.”

೨೧. " ನಿಯತಿಯನಾರ್ ಮೀರಿದಪರ್ "

**ಈ ಕೆಳಗಿನ ಲೇಖಕರ / ಕವಿಯ ಸ್ಥಳ ,ಕಾಲ,ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. ೨*೩=೬**

೨೨. ಸಾ.ಶಿ . ಮರುಳಯ್ಯ ೨೩. ಕಡಕೋಳ ಮಡಿವಾಳಪ್ಪ

**೨೪. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ. ೧*೩ =೩**

ಬುದ್ಧನೆಂದರೆ ---------- ಅಥವಾ ಬಾರಯ್ಯ -------------

----------------- ---------------------

------------------- -----------------

----------ರಥದಿ . ಬಾರಯ್ಯ -------------ನುಡಿ

**೨೫. ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು , ಅಡಕವಾಗಿರುವ ಮೌಲ್ಯವನ್ನಾಧರಿಸಿ ಪದ್ಯದ ಸಾರಾಂಶವನ್ನು ಬರೆಯಿರಿ. ೧*೪ =೪**

ಸುಲಿದ ಬಾಳೆಯ ಹಣ್ಣಿನಂದದಿ

ಕಳೆದ ಸಿಗುರಿನ ಕಬ್ಬಿನಂದಿ
ಅಳಿದ ಉಷ್ಣದ ಹಾಲಿನಂದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು ?

. ಈ ಕೆಳಗಿನ ಪ್ರಶ್ನೆಗಳಿಗೆ ಆರು ಅಥವಾ ಎಂಟು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨*೩ =೬

೨೬.ದುರ್ಯೋಧನ ಮತ್ತು ದುರ್ಜಯರ ನಡುವೆ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.
ಅಥವಾ
ಅಶ್ವತ್ಥಾಮನು ದುರ್ಯೋಧನನ ಬಳಿ ಸಾರುವ ಮೊದಲು ಆಡಿದ ನುಡಿಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

೨೭. ಹರಿಶ್ಚಂದ್ರನು ನೀಡಿದ ಬಹುಮಾನ ತಿರಸ್ಕರಿಸಿದ ಗಾನರಾಣಿಯರು ಹೇಳಿದ ಮಾತುಗಳನ್ನು ತಿಳಿಸಿ.
ಅಥವಾ
ಹರಿಶ್ಚಂದ್ರ ಮತ್ತು ಗಾನರಾಣಿಯರ ನಡುವೆ ನಡೆದ ಸಂವಾದವನ್ನು ಸಂಗ್ರಹಿಸಿ ಬರೆಯಿರಿ.

೨೮. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ,ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೨*೨=೪

ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕೆ ನೈಜ ಭೂಮಿಕೆ ಕಿತ್ತೂರ ಚೆನ್ನಮ್ಮನ ಸಾಹಸ.ಅದು ವಿಧ್ಯುಕ್ತವಾಗಿ ಉದ್ಘಾಟನೆಯಾದುದು ೧೮೫೭ ಮಾರ್ಚ್ ೨೯. ಸ್ವಾತಂತ್ರ್ಯ ಸೇನಾನಿ ಮಂಗಲಪಾಂಡೆ ಬ್ರಿಟಿಷ್ ಸಾರ್ಜೆಂಟನಿಗೆ ಗುಂಡಿಟ್ಟ ದಿನ. ಸ್ವಾತಂತ್ರ್ಯದ ಕಿಚ್ಚನ್ನು ವೀರೋಚಿತವಾಗಿ ಹೊತ್ತಿಸಿದ ಈ ರಣಯಜ್ಞಕ್ಕೆ ಆಹುತಿಯಾದವರು ಝಾನ್ಸಿರಾಣಿ ಲಕ್ಷ್ಮಿಬಾಯಿ ,ಬಹದ್ದೂರ್ ಷಾ ,ಕನ್ವರ್ ಸಿಂಗ್ ,ತಾತ್ಯಾಟೋಪಿ ಮೊದಲಾದ ಅಸಂಖ್ಯಾತ ವೀರರು ,ಸಾವಿರಾರು ತಾಯಂದಿರು ತಮ್ಮ ಮಕ್ಕಳನ್ನು ದೇಶಕ್ಕಾಗಿ ಬಲಿ ನೀಡಿದರು. ಅನೇಕ ಮುತ್ತೈದೆಯರು ಮಂಗಳಮಯ ತಾಳಿಯ ಮುತ್ತುಗಳನ್ನು ನಾಡಿಗಾಗಿ ಅರ್ಪಿಸಿದರು. ಈ ಕ್ರಾಂತಿಪಥ ಇತಿಹಾಸದುದ್ದಕ್ಕೂ ಹರಿದುಬಂದಿದೆ. ಸಹಸ್ರ ಸಹಸ್ರ ಜನರ ಪ್ರಾಣತ್ಯಾಗದಲ್ಲಿ ಲಕ್ಷಾಂತರ ಜನರ ಯಾತನೆಯಲ್ಲಿ ದಟ್ಟ ದಾರಿದ್ರ್ಯದ ಮಧ್ಯದಲ್ಲಿ 'ಸ್ವಾತಂತ್ರ್ಯದ ಗುಲಾಬಿ ' ಅರಳಿದುದೆ ಇಲ್ಲಿಯ ವಿಶೇಷ

ಪ್ರಶ್ನೆಗಳು : ೧. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ನೈಜ ಭೂಮಿಕೆ ಒಗಿಸಿದವರು ಯಾರು ?ಅದು ವಿಧ್ಯುಕ್ತವಾಗಿ ಉದ್ಘಾಟನೆಯಾದುದು ಯಾವಾಗ ?

೨. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹುತಾತ್ಮರಾದ ವೀರರು ಯಾರು ?ಈ ಕ್ರಾಂತಿಗೆ ಯಾರು ಯಾರು ಏನನ್ನು ಅರ್ಪಿಸಿದರು ?

## ಭಾಗ – 'ಬಿ'

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ.ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ,ಉತ್ತರಕ್ಕಾಗಿಯೇ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. ೮ *೧=೮

೨೯.ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ---
ಎ ) ಅಲ್ಪಪ್ರಾಣಗಳು ಬಿ)ಅನುನಾಸಿಕಗಳು ಸಿ)ಯೋಗವಾಹಗಳು ಸಿ) ಸ್ವರಗಳು

೩೦. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದ ----
ಎ) ಪಾತ್ರವನ್ನು ಬಿ)ಚಳಿಗಾಲ ಸಿ)ಶುದ್ಧಿಯನ್ನು ಡಿ)ಪಡೆದಿದ್ದೇನೆ

೩೧.' ಒಗ್ಗಟ್ಟು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ. ----
ಎ) ದ್ವಂದ್ವ ಸಮಾಸ ಬಿ)ಕರ್ಮಧಾರಯ ಸಿ)ದ್ವಿಗು ಸಮಾಸ ಡಿ)ಅಂಶಿ ಸಮಾಸ

೩೨. ' ಭವನದೊಳ್ ' ಪದದಲ್ಲಿರುವ ವಿಭಕ್ತಿ --
ಎ)ಪ್ರಥಮಾ ಬಿ)ದ್ವಿತೀಯಾ ಸಿ)ತೃತೀಯಾ ಡಿ)ಸಪ್ತಮಿ

೩೩. ಕೆಳಗಿನವುಗಳಲ್ಲಿ ಉತ್ತಮ ಪುರುಷ ಸರ್ವನಾಮ -----
ಎ)ನೀನು ಬಿ)ಅವನು ಸಿ)ತಾನು ಡಿ)ನಾನು

೩೪. ಕ್ರಿಯಾಪದದ ಮೂಲ ರೂಪವನ್ನು ಹೀಗೆ ಕರೆಯುತ್ತಾರೆ ----

ಎ)ಕೃದಂತ ಬಿ)ದ್ವಿರುಕ್ತಿ ಸಿ)ಅವ್ಯಯ ಡಿ)ಧಾತು

೩೫. ' ಬರುತ್ತೇನೆ ' ಕ್ರಿಯಾಪದವನ್ನು ಭವಿಷ್ಯತ್ ಕಾಲಕ್ಕೆ ಪರಿವರ್ತಿಸಿದಾಗ ಕ್ರೀಯಾಪದವು ಹೀಗೆ ಬದಲಾಗುವುದು

ಎ) ಬರುತ್ತಿದ್ದೇನೆ ಬಿ)ಬರುವೆನು ಸಿ)ಬಂದೆನು ಡಿ)ಬರುವನು

೩೬. ' ಹೋದೀತು ' ಕ್ರಿಯಾಪದದ ವಿಧ್ಯರ್ಥಕ ರೂಪ ---

ಎ)ಹೋಗಲಿ ಬಿ)ಹೋದಾರು ಸಿ)ಹೋಗದು ಡಿ)ಹೋದೆವು

**ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ. ೪*೧=೪**

೩೭. ಬಿನ್ನಹ :ವಿಜ್ಞಾಪನೆ : : ಸೊದೆ –

೩೮.ಮ್ಯಾಗೆ : ಮೇಲೆ : : ಬ್ಯಾಡ : ----

೩೯. ಛಾಪು : ವರ್ಚಸ್ಸು : : ಮಂತ್ರಮುಗ್ಧ : ----

೪೦. ದೊಡ್ಡದೊಡ್ಡ : ದ್ವಿರುಕ್ತಿ : : ಚಿಕ್ಕಪುಟ್ಟ : ---

**೪೧ .ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ,ಗಣವಿಭಾಗ ಮಾಡಿ,ಛಂದಸ್ಸಿನ ಹೆಸರು ಬರೆಯಿರಿ. ೧*೩=೩**

ಸಕ್ಕದಮಂ ಪೇಳ್ದೊಡೆ ನೆರೆ
ಸಕ್ಕದಮಂ ಪೇಳ್ಗೆ ಶುದ್ಧ ಕನ್ನಡದೊಳ್ ತಂ

**ಅಥವಾ**

ರವಿಕುಲದ ಪೀಳಿಗೆಯೊಳೊಗೆದ ರಾಯರ್ಗೆ ಪ
ಟ್ಟವ ಕಟ್ಟುವಂದಿದಿಲ್ಲದಡರಸುತನ ಸಲ್ಲ
ದವನಿಯೊಳು ಯುದ್ಧರಂಗದೊಳಿದಂ ಕಂಡ ಹಗೆಗಳು ನಿಲ್ಲರಿದರ ಕೆಳಗೆ

**೪೨. ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ,ಲಕ್ಷಣಬರೆದು ಸಮನ್ವಯಿಸಿ . ೧*೩=೩**

" ದೈವಮಂದಿರವನ್ನು ಭಕ್ತರು ಅಲಂಕರಿಸುವಂತೆ "

**ಅಥವಾ**

" ದುರಾಶಾಪಿಶಾಚಿ "

**೪೩. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. ೧*೩=೩**

* ದೇಶ ಸುತ್ತಿ ನೋಡು ;ಕೋಶ ಓದಿ ನೋಡು
* ಮನಸ್ಸಿದ್ದರೆ ಮಾರ್ಗ
* ಕೈ ಕೆಸರಾದರೆ ಬಾಯಿ ಮೊಸರು

**೪೪. ನಿಮ್ಮನ್ನು ಶಾಂತಿಕಾಂಬಾ ಪ್ರೌಢಶಾಲೆ ಕುಮಟಾದಲ್ಲಿ ೯ ನೇ ತರಗತಿಯಲ್ಲಿ ಓದುತ್ತಿರುವ 'ಶ್ರೀಧರ /ಶ್ರೀದೇವಿ 'ಎಂದು ಭಾವಿಸಿ , ಯಾವುದಾದರೂ ಸೂಕ್ತವಾದ ಕಾರಣ ನೀಡಿ ನಿಮ್ಮ ವರ್ಗದ ಶಿಕ್ಷಕರಿಗೆ ರಜಾ ಅರ್ಜಿ ಬರೆಯಿರಿ. ೧*೪=೪ ಅಂಕಗಳು**

**ಅಥವಾ**

ನಿಮ್ಮ ಶಾಲೆಯಲ್ಲಿ ಕೈಗೊಳ್ಳಲಿರುವ ಪ್ರವಾಸಕ್ಕೆ ಹೋಗುವ ಸಲುವಾಗಿ ಸಾವಿರ ರೂಪಾಯಿಗಳನ್ನು ಕಳಿಸಿಕೊಡುವಂತೆ ಕೋರಿ,ಹೊನ್ನಾವರ ಧಾರೇಶ್ವರದಲ್ಲಿ ವಾಸಿಸುತ್ತಿರುವ ನಿಮ್ಮ ತಂದೆ 'ಮೋಹನ್ 'ರವರಿಗೆ ಪತ್ರ ಬರೆಯಿರಿ.

**೪೫. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. ೧*೪=೪**

* ರಾಷ್ಟ್ರೀಯ ಭಾವೈಕ್ಯತೆ * ಮಹಿಳಾ ಸಬಲೀಕರಣ * ಪರಿಸರ ಸಂರಕ್ಷಣೆ